

'ಇಲ್ಲಿ ಎಷ್ಟು ಕಾಲದಿಂದ ಇದ್ದೀಯಾ' ಅಂತ ನೀವು ಕೇಳ್ತೀರಿ. ಇದು ಹನ್ನೆರಡನೇ ವರ್ಷ. ಲೆಕ್ಕ ಸರಿಯಾಗಿದೆ ಅಂತ ಖಚಿತಪಡಿಸ್ಕೊಳ್ಳೋದಕ್ಕೆ ಮತ್ತೆಮತ್ತೆ ಎಣಿಸ್ಬೇಕಾಗ್ತದೆ ನನಗೆ. ಅಷ್ಟು ಹಿಂದೆ ಅದು. ಇಷ್ಟೂ ವರ್ಷ ಗೃಹ ಮಂತ್ರಾಲಯ ಮತ್ತು ಕಚೇರಿಯಿಂದ ಕಚೇರಿ ನಡುವೆ ಅಲೆದಾಡ್ತಾನೇ ಇದ್ದೆ. ಗೃಹ ಮಂತ್ರಾಲಯ ಅಂದ್ರೆ ನಾನು ಅಲ್ಲಿಗೇ ಹೋಗ್ತೇನೆ ಅಥ್ವಾ ಅಲ್ಲಿ ಯಾರನ್ನೋ ಭೆಟ್ಟಿ ಆಗ್ತೇನೆ ಅಂತ ಅಲ್ಲ. ಸುಮ್ನೇ... ಪತ್ರಗಳು ಬರ್ತವೆ ಇದು ಮಾಡು, ಅದು ಮಾಡು, ಇಲ್ದಿದ್ರೆ... ಅಂತ. ಮೀರೋದಿರ್ಲಿ ಸಹಕರಿಸದಿದ್ರೂ ಅವ್ರು ಸಹಿಸೋದಿಲ್ಲ. ಈ ಪತ್ರಗಳ ಹಿಂದೆ ಸೌಲಭ್ಯ ಕಸಿದುಕೊಳ್ತೇವೆ, ಜೈಲಿಗೆ ಹಾಕ್ತೇವೆ, ಗಡಿಪಾರು ಮಾಡ್ತೇವೆ ಅಂತೆಲ್ಲ ಬೆದರಿಕೆಗಳ ಪಟ್ಟೀನೇ ಇರ್ತದೆ ಅನ್ನೋದು ಎಲ್ರಿಗೂ ಗೊತ್ತು.

ಗಡಿಪಾರು ಮಾಡ್ಬೇಕು ನನ್ನ ಅಂತ್ಲೇ ಕಳೆದ ಒಂಬತ್ತು ವರ್ಷದಿಂದ ಕಾಯ್ತಿದ್ದಾರೆ. 2009ರಲ್ಲಿ ನಂಗೆ ಜೈಲಾಯ್ತು. ಆಗಿಂದ ಅವ್ರು ಕಾಯ್ತಿದ್ದಾರೆ. ಜೈಲು ಶಿಕ್ಷೆ ಒಂದು ವರ್ಷಕ್ಕಿಂತ ತುಸು ಹೆಚ್ಗೆ ಅಂತ ತೀರ್ಪು ಕೊಟ್ರು. ಅದರ ಅರ್ಥ ಬಿಡುಗಡೆ ಆದ್ಕೂಡ್ಲೇ ಗಡಿಪಾರಿಗೆ ಅರ್ಹ ಆಗ್ತೇನೆ ಅಂತ. ಗಡಿಪಾರು ಮಾಡೋಕೆ ಗೃಹ ಮಂತ್ರಾಲಯಕ್ಕೆ ಅವಕಾಶ ಆಗ್ಲಿ ಅಂತಾನೇ ನ್ಯಾಯಾಲಯಗಳು ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಗೆ ಜೈಲುಶಿಕ್ಷೆ ತೀರ್ಪು ನೀಡ್ತವೆ. ಎಲ್ಲಾ ಸಲ ಅವ್ರು ಯಾಕೆ ಯಶಸ್ವಿ ಆಗೋದಿಲ್ಲ ಅಂದ್ರೆ ಅವ್ರನ್ನ ತಡೆಯೋಕೆ ಕಾನೂನು ಇದೆ, ಒಳ್ಳೇ ಮನಸ್ಸಿನ ವಕೀಲ್ರಿದ್ದಾರೆ, ಏನಿಲ್ಲಾಂದ್ರೂ ಅವ್ರು ಅದನ್ನ ತಡ ಮಾಡಿಸ್ತಾರೆ. ಮತ್ತೆ ಅವ್ರು ಕಳಿಸ್ತೀರೋ ದೇಶ ನನಗೆ ಸುರಕ್ಷಿತವಾದದ್ದು, ಆ ದೇಶಾನೂ ನನ್ನ ವಾಪಸ್ ತಗೊಳ್ಳೋದಕ್ಕೆ ಸಿದ್ಧರಿದ್ದಾರೆ ಅನ್ನೋತನಕ ಅವ್ರಿಗೆ ಗಡಿಪಾರು ಮಾಡೋದಕ್ಕೆ ಆಗೋದಿಲ್ಲ. ನಿಮ್ಗೆ ಗೊತ್ತಿದೆ ನನ್ನ ದೇಶ ಘ—ಅಂತ. ನಾನು ಅಲ್ಲಿಂದ ಓಡಿಬಂದೆ ಯಾಕಂದ್ರೆ ಅಲ್ಲಿ ನನ್ನ ಜೀವಕ್ಕೆ ಅಪಾಯ ಇತ್ತು. ಆದ್ರೆ ಗೃಹ ಮಂತ್ರಾಲಯದವ್ರು, 'ಈಗ ಅಷ್ಟೊಂದು ಅಪಾಯ ಇಲ್ಲ, ನಾನು ಸುರಕ್ಷಿತವಾಗಿ ವಾಪಸ್ ಹೋಗ್ಬಹುದು' ಅಂತ ಹೇಳ್ತಿದಾರೆ. ನನಗೇನೂ ಹಾಗೆ ಅನ್ನಿಸೋದಿಲ್ಲ. ಇವ್ರು ಏನೇ ಅಂದ್ರೂ ಘ—ನನ್ನನ್ನ ಒಳ್ಗೆ ಸೇರಿಸ್ಕೊಳ್ಳೋದಿಲ್ಲ. ಯಾಕಂದ್ರೆ, ನಾನು ಘ—ದವನೇ ಅಂತ ಸಾಬೀತು ಮಾಡೋಕೆ ಯಾವ ಕಾಗದಪತ್ರಾನೂ ನನ್ನಲ್ಲಿಲ್ಲ.

ನಾನು ದೇಶಹೀನ ಮನುಷ್ಯ ಅಂತ ಗುರುತಿಸಿಕೊಳ್ಳೋದಕ್ಕೆ ಅರ್ಜಿ ಸಲ್ಲಿಸ್ದೇನೆ. ದೇಶಹೀನ ಅಂತಾದ್ರೆ ಮನೆ ಮಾಡ್ಕೋಬಹುದು, ಇಲ್ಲಿ ಕೆಲ್ಸ ಮಾಡಿ ದೇಶಕ್ಕೆ ಕೈಲಾದ ಸೇವೆ ಸಲ್ಲಿಸ್ಬಹುದು. ಮತ್ತೆ ಸ್ವಲ್ಪ ಸಮಯದ ನಂತ್ರ ಪೌರತ್ವಕ್ಕೂ ಅರ್ಜಿ ಹಾಕಬಹುದು. ಆದ್ರೆ ಅಲ್ಲೂ ಎಲ್ಲಾ ಗೊಂದಲ. ದೇಶಹೀನ ಅಂತ ಅರ್ಜಿ ಹಾಕೋಕೆ ಕಾನೂನು ಇದ್ರೂ ನನ್ನನ್ನ ಗಡಿಪಾರು ಮಾಡ್ಬೇಕು ಅಂತ್ಲೇ ಗೃಹ ಮಂತ್ರಾಲಯದವರು, 'ಪ್ರಯಾಣ ದಾಖಲೆ ತಗೊಂಡ್ಬಾರಯ್ಯ' ಅಂತ ಎಂಬಸಿಗೆ ಓಡಿಸ್ತಿರ್ತಾರೆ. ಮೂರು ಸಲ ಎಂಬಸಿಗೆ ಹೋಗಿದೇನೆ. ಅಷ್ಟೂ ಸಲ ಅವ್ರು ವಾಪಸ್ ಕಳಿಸಿದ್ರು. ಯಾಕಂದ್ರೆ ನನ್ನತ್ರ ನನ್ನ ರಾಷ್ಟ್ರೀಯತೆ ಸಾಬೀತು ಮಾಡೋಕೆ ಯಾವ ದಾಖಲೆಯೂ ಇಲ್ಲ ನೋಡಿ. ಹಿಂದಿನ ಸಲ ಅಲ್ಲಿದ್ದ ಹೆಂಗಸು ನನ್ನನ್ನು ನೋಡಿ ನಗೆಯಾಡಿದ್ಳು. 'ನೀನಿನ್ನೂ ಇಲ್ಲೇ ಇದ್ದೀಯಾ' ಅಂದ್ಳು. 'ಗೃಹ ಮಂತ್ರಾಲಯದವ್ರು ಇಲ್ಲಿಗೆ ಕಳ್ಸಿ ನಿನ್ನ ಸಮಯ ಹಾಳು ಮಾಡ್ತಿದ್ದಾರೆ. ಎಷ್ಟು ಸಲ ಬಂದೆ ನೀನು! ಘ—ದವನು ಅಂತ ನೀನು ದಾಖಲೆ ತೋರಿಸೋವರೆಗೂ ನಾವೇನೂ ಮಾಡೋಕಾಗೋದಿಲ್ಲ.'

ಗೃಹ ಮಂತ್ರಾಲಯದವ್ರು ಹೇಳಿದಾಗ್ಲೆಲ್ಲ ಎಂಬಸಿಗೆ